ಉತ್ತರ

ಅ) ಹೌದು ಆದರೆ, ಉಗ್ರಾಣಿ ಹೋಬಳಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವ ಫೀಡರ್‌ನ್ನು ಬೇರ್ಪಡಿಸಿ ಇದಕ್ಕೆ ಗೊವ್ವೇನಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ಒಂದು ಹೊಸ 11 ಕೆ ವಿ ವಿದ್ಯುತ್ ಮಾರ್ಗದ ಮೂಲಕ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿರುವುದರಿಂದ, ಸದರಿ ಹೋಬಳಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವ ಫೀಡರ್‌ನ ಮೇಲೆ ವಿದ್ಯುತ್ ಹೊರೆಯು ಕಡಿಮೆಯಾಗಿದ್ದು, ಇದರಿಂದ ಸದರಿ ಪ್ರದೇಶಗಳಲ್ಲಿನ ಕಡಿಮೆ ವೋಲ್ಟೇಜ್ ಸಮಸ್ಯೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗಿರುತ್ತದೆ

ಆ ಮತ್ತು ಇ) ಚನ್ನಗಿರಿ ತಾಲ್ಲೂಕಿನ ತಾವರೆಕೆರೆ ಗ್ರಾಮದಲ್ಲಿ ಒಂದು ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಒಂದು ತಾಂತ್ರಿಕ ವರದಿಯನ್ನು ಪಡೆಯಲಾಗಿದ್ದು, ಇದನ್ನು ಪರಿಶೀಲಿಸಿ ನಿಗಮದ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಲಾಗುವುದು ನಿಗಮದ ತಾಂತ್ರಿಕ ಸಮಿತಿಯು ಈ ವಿಷಯದಲ್ಲಿ ತೆಗೆದುಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು

ಭದ್ರಾವತಿ ತಾಲ್ಲೂಕು ಅನವೇರಿ ಹೋಬಳಿಗೆ ಪವರ್ ಸ್ಟೇಷನ್ ಪ್ರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 155(184)

ಸದಸ್ಯರ ಹೆಸರು ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್ (ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕು ಅನವೇರಿ ಹೋಬಳಿಗೆ ಸುಮಾರು 25 ರಿಂದ 30 ಗ್ರಾಮಗಳಿಗೆ ವಿದ್ಯುತ್ ಅಭಾವವಿದ್ದು ಒಲ್ಟೇಜ್ ಸಮಸ್ಯೆ ಇರುವುದರಿಂದ ಕುಡಿಯುವ ನೀರು ಮತ್ತು ಹಿಟ್ಟಿನ ಗಿರಣಿ ಮತ್ತು ಮನೆ ದೀವಗಳಿಗೆ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಹಾಗಿದ್ದಲ್ಲಿ, ಇದರ ಅಭಿವೃದ್ಧಿಗೆ ಮಲ್ಲಾಪುರ ಗ್ರಾಮದಲ್ಲಿ ಒಂದು ಪವರ್ ಸ್ಟೇಷನ್ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಇ ಈ ಭಾಗದ ರೈತರಿಗೆ ಅನುಕೂಲ ಮಾಡಿಕೊಡಲು ಆದ್ಯತೆ ಮೇಲೆ ಕಾರ್ಯನಿರ್ವಹಿಸಲು ಕೆ ಪಿ ಟಿ ಸಿ ಎಲ್ ಗೆ ಸೂಚಿಸಲಾಗುವುದೇ?

ಉತ್ತರ

ಅ) ಹೌದು ನಿಗಮದ ಗಮನಕ್ಕೆ ಬಂದಿದೆ

ಆ ಮತ್ತು ಇ) ಮಲ್ಲಾಪುರ ಗ್ರಾಮದಲ್ಲಿ ಒಂದು 66 11 ಕೆ ವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು ಈ ಯೋಜನೆಗೆ ನಿಗಮದ ತಾಂತ್ರಿಕ ಸಮಿತಿಯು ಅಕ್ಟೋಬರ್ 2001ರಲ್ಲಿ ತನ್ನ ಅನುಮೋದನೆಯನ್ನು ನೀಡಿರುತ್ತದೆ ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಕಾರ್ಪೊರೇಟ್ ಕಛೇರಿಯ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ, ನಿರ್ಮಾಣ ಕಾರ್ಯದ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಬೆಳ್ತಂಗಡಿ ತಾಲ್ಲೂಕಿನಲ್ಲಿ ರೈತರ ನೀರಾವರಿ ವಿದ್ಯುತ್ ಪಂಪ್ ಸೆಟ್‌ಗಳಿಗೆ ವಿದ್ಯುತ್ ನರಬರಾಜು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 156(214)

ಸದಸ್ಯರ ಹೆಸರು ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ರೈತರ ನೀರಾವರಿ ವಿದ್ಯುತ್ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು? ಅರ್ಜಿ ಕೊಟ್ಟು ಎಷ್ಟು ದಿನಗಳಲ್ಲಿ ವಿದ್ಯುತ್ ನರಬರಾಜು ಮಾಡಲಾಗುತ್ತದೆ

ಆ ದಕ್ಷಿಣ ಕನ್ನಡ ಜಿಲ್ಲೆಯ ರೈತರ ವಂಪ್‌ಸೆಟ್‌ಗಳಿಗೆ ನಿಗದಿಪಡಿಸಿರುವ ಶುಲ್ಕವು ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹೆಚ್ಚುವರಿ ಶುಲ್ಕ ಪಾವತಿಸದೆ ಇರುವ ಕೃಷಿಕರಿಗೆ ವಿದ್ಯುತ್ ನರಬರಾಜು ಕಡಿತಗೊಳಿಸುವುದಾಗಿ ಇಲಾಖೆಯು ಸರ್ಕಾರದ ಗಮನಕ್ಕೆ ಬಂದಿದೆಯೇ? ರೈತರ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮವೇನು ತಿಳಿಸುತ್ತಿರುವುದು?